ಎಷ್ಟ್ ದಿನ ಮುಚ್ಚಿಡುಲಾಗ್ತು? ಆತೂ ಗಂಡಂಗೆ ಬೆರ್ಳು ಸೋಂಕ್ಸುಲು ಬಿಟ್ಟಿದ್ದಿಲ್ಲೆ ಹೇಳ್ತಿದ್ವಲ್ಲೆ ಮತ್ತೆ. ಈಗ ನೋಡ್ದ್ರೆ ಬಸರ್ ಬಂದಾಂಗ ಕಾಣ್ತು. ಎಂತ ಹೇಳವು ಹೇಳೆ ಗೊತ್ತಾಗ್ತಿಲ್ಲೆ ನಂಗಂತೂವಾ!' ಅತ್ತೆಯ ಧ್ವನಿಯಲ್ಲಿ ಮರುಕ, ತಿವಿತ ಎರಡೂ ಇತ್ತು.

'ಎಮ್ಮನೆ ಕೊಟ್ಗೇಲಿ ಗೌರೀನೂ ಹಂಗೆ ಅಲ್ದಾ ಮತ್ತೆ. ಮನೆ ಮಂದಿಗೆ ಮುಟ್ಟೂಲರೂ ಕೊಡ್ತಿತ್ತಾ? ಪ್ರಾಣಿ ಪಕ್ಷಿ ನೋಡಿದ್ರೂ ಸಾಕು ಕಣ್ ಮೇಲೆತ್ತಿ ನೆಲ ಕೆದರ್ತು. ಕಂಡವ್ರೆಲ್ಲ ಮಾರ್ ದೂರ ಓಡಿ ಹೋಗೋ ಹಂಗಿತ್ತು. ಒಂದಿನ 'ದನ ಗಬ್ಬಿದ್ದು' ಹೇಳಿ ನೀವ್ ಹೇಳಿದ್ದ ದಿನ ನಂಗೆ ನಂಬೂಲೆ ಆಯ್ದಿಲ್ಲೆ. ಹಂಗೇಯ ಇದೂವಾ. ಏನೇ ಹೇಳಿ ನಾಗಿ ಮೈಮೇಲೇರುವಷ್ಟು ಪಳಗಿಸಿಕಂಡ್ದಾ ಅಂದ್ರೆ ಅವ್ನೇನೂ ಸಾಮಾನ್ಯದವನಲ್ಲ ಬಿಡಿ, ಅವ್ನೂ ಮಹಾ ಪಳಗಿದವ್ನೆ. ರಾಮಾ ರಾಮಾ ನಂಗೆಂತಕೆ ಬೇರೆಯವ್ರ ವಿಷ್ಯ. ಅಕಕೊ ಮಾಡಿದ ಪಾಪ ಅಕಕನೇ ಅನುಭವಸೊ. ಈಗ ಗೊತ್ತಾಗ್ತಿಲ್ಲೆ, ಮುಂದ ಒಂದಿನ ಗೊತ್ತಾಗ್ತು. ಅನುಭವ್ಸಕಂಡ ಸಾಯ್ಲಿ. ನಂಗೊ ಎಂತಕೆ ತಲೆ ಹಾಳ್ಮಾಡ್ಕಳವು. ಒಳಗಡೆ ಚಾಕ್ರಿ ಏನ್ ಸಲ್ಪಿಲ್ಲೆ' ಎಂದುಕೊಳ್ಳುತ್ತ ಸೆರಗ ಸೊಂಟಕ್ಕೆ ಸಿಕ್ಕಿಸಿ ಸೃಷ್ಟಿಕರ್ತನ ಸುಳಿವನ್ನು ಗಂಗೊಡ್ತಿ ನೀಡಿ ಒಳಗೆ ಸರಿದಳು.

ಹಾಗೇ ನಾಗಿ ತೋಟದ ನಡುವೆ ಹರಿದು ಹೋಗೋ ಸಣ್ಣ ಹಳ್ಳದಗುಂಟ ಸಾಗಬೇಕು. ಅಲ್ಲಿ ಬಟ್ಟೆ ಸೆಳೀತಾ ಇದ್ದ ಶಾರದೆ ಸಾವಿತ್ರಿಯರು ಬಟ್ಟೆ ಕುಸುಬುವುದನ್ನು ಬಿಟ್ಟು ನಾಗಿಯನ್ನೇ ಕಣ್ಣು ರೆಪ್ಪೆ ಬಡಿಯದೆ ನೋಡತೊಡಗಿದರು.

'ಅಲ್ಲಾ ಮನಸ್ರ ಮುಖ ಅಂಬೂದು ನೋಡುದಿಲ್ಲಲೆ ಶಾರದಕ್ಕ ಆ ನಾಗಿ. ಮತ್ತೆ ಹೀಂಗೆಲ್ಲ ಹೇಂಗ್ ಆಯ್ತೆ? ಅಲ್ಲಾ ಅವ್ರಿವ್ರ ಕೈಲಿ ಬಸ್ರ ಆಗೂದ ಗಂಡನ ಕೈಲೆ ಆಗಿದ್ರ ಎಂತ ರೋಗ ಆಯ್ತಿತ್ತೆ ಇದ್ಕೆ. ಹಾಂಗೆ ಸುಮಾರ್ಕೆ ಕೈಗೆ ಸಿಕ್ಕೂದಲ್ಲಪ್ಪ. ಕೋಳಿ ಮೆಟ್ಟದಂಗೆ ಮೆಟ್ಟಿರ್ಬೇಕು. ಇಲ್ದಿದ್ರೆ ಈ ಹೆಣ್ಣು ಕೈಗೆ ಸಿಕ್ವಳಾ? ಆದ್ರೂ ಯಾವ ಮಾಯ್ಕದಲ್ಲಿ ನಡೆತೊ ದ್ಯಾವರೇ ಬಲ್ಲ. ಅಂತೂ ಹೆಗ್ಡೇರ ಸಾಸಕ್ಕೆ ಮೆಚ್ಚುದೆಯ ಬಿಡು'. ಇನ್ನೂ ಏನೇನೋ ಹೇಳ ಹೊರಟ ಸಾವಿತ್ರಕ್ಕನ ಮಾತಿನ ಮಧ್ಯೆ ಶಾರದಕ್ಕ ಪ್ರವೇಶಿಸಿದಳು.

'ಅದು ಅವ್ರ ತಪ್ಪು ಹೇಳೂಕು ಆಗೊದಿಲ್ವೆ ಸಾವಿತ್ರಕ್ಕ. ಆ ನಾಗಿ ನೋಡ್ದ್ರೇ ಯಾರಾರು ಗೌಡ್ತಿ ಹೆಂಗ್ಸು ಅಂಬೂರನೆ. ಆ ಉರೂಟ ಮುಖ, ಹಾಲ್ನಲ್ಲಿ ಅದ್ತೆಗ್ದಂತ ಮೈಯಿ ನೋಡ್ದ್ರೆ ನಿವಾಳ್ಸಿ ತೆಗೆವಾಂಗಿಲ್ವನೆ? ಸೀರೆ ಉಡಣ ಒಂದೇ ಬೇರೆ ನಮ್ನಿ ನೋಡು. ಪಲ್ಲಿಲ್ಲದ ಗಂಟು ಉಡುಗೇಲಿ ಗಲಗಲ ಮಾಡ್ಕಂತ್ ಬಂತು ಅಂದ್ರೆ ಅಲ್ಲಾ ನಮ್ಮಮ್ಮಲ್ಲೆ ಹೇಳ್ಕಂಬೂಕೇನೆ, ನಮ್ಗೇ ನಿಂತು ನೋಡ್ವಾ ಕಾಣ್ತದೆ. ಇನ್ ಆ ಒಡಿದೀರ್ ಬಿಡ್ತಾ? ಆ ಒಡ್ತೀರ್ ನೋಡ್ದ್ರೇ ಇಡೀ ಮೈಯೆಲ್ಲ ಬಗ್ಗದ್ರೂ ಒಂದು ಮುಷ್ಟಿ ಮಾಯ್ಸ ಸಿಕ್ಕೂದಿಲ್ಲ. ಇದೇನ್ ಮೊದ್ಲಂದೇನೆ? ಎಷ್ಟ್ ಆಯ್ತೇನ ಇಂತದ್ದು. ಅವ್ರಗೇನು ದುಡ್ಡಿದ್ದವ್ರು. ಅಲ್ಲಾ ಈ ಮುಗೂಗಾದ್ರು ಬುದ್ಧಿ ಬೇಡ್ವೆನೆ. ಎಂತ ಮಾಡೂದು, ಸರಿ ಈಟ್ಗೆ ಬಂದ್ನೊತ್ತು. ಆಗೋಯ್ತದೆ ಪಾರಾಮಸಿ. ಮನಸ್ರ ಎಡ್ವದೆ ಕಲ್ ಎಡ್ವತದೇನೆ ಸಾವಿತ್ರಕ್ಕ? ನೀ ಏನೇ ಹೇಳು ಹೊಟ್ಟೆ ಬರ್ಲಕ ಬೇಕಾದ್ರೆ ಖುಷಿ ಆಯ್ತದೆ, ಈಗ ಅದೆ ನೋಡು ಹೆರು ಕಾಲಕ್ಕೆ. ನಡೆಲಿ ನಡೆಲಿ ದೇವ್ರೆ ಗತಿ' ಅನ್ನುತ್ತಿರುವಾಗ ಹೊಳೆ ಹತ್ತಿರ ಯಾರೋ ಬಿಳಿ ಪಂಚೆ ಮನುಷ್ಯರ ಸುಳಿವಿನ ಜಾಡನ್ನು ಹಿಡಿದು ಒಡ್ಯಾನೆ ಇರಬೇಕು ಅಂದುಕೊಂಡು ಬಾಯ್ಮುಚ್ಚಿದರು. ತೊಳೆದ ಬಟ್ಟೆಗಳನ್ನೆಲ್ಲ ಹಿಂಡಿ ಪ್ಲಾಸ್ಟಿಕ್ ಬುಟ್ಟಿಯಲ್ಲಿ ಹಾಕಿಕೊಂಡು ತೊಡೆಯವರೆಗೂ ಏರಿಸಿಕೊಂಡ ಸೀರೆ ನೆರಿಗೆಯನ್ನು ಕುಡುಗಿಕೊಳ್ಳುತ್ತ ತೋಟದ ದಾರಿ ಹಿಡಿದ ಒಡೇರನ್ನು ಕದ್ದು ಕದ್ದು ನೋಡುತ್ತ ತಮ್ಮ ತಮ್ಮ ಒಡೆದೀರ ಮನೆಗೆ ಕವಲು ದಾರಿಯಲ್ಲಿ ನಡೆದರು.

ಇದಾವುದರ ಕಡೆಗೂ ಕಣ್ಣು ಕಿವಿ ಹಾಯಿಸದ ನಾಗಿ ನೀರ ಕೆಳಗಿನ ತೋಟ ಸೇರಿ ನಿನ್ನೆ ಸಂಜೆ ಬಿಟ್ಟು ಹೋಗಿದ್ದ ತೋಟದ ಬೆಲ್ಲುಗಗಳಿಗೆ ಮರದ ಹಾಳೆಯಿಂದ ನೀರು ತೋಕತೊಡಗಿದಳು. 'ಕೂssss ಹೊಯ್' ಎಂಬ ಒಡ್ತೀರ ಕ್ಷೀಣ ಕರೆಗೆ ಸಣ್ಣ ಏರು ಹತ್ತಿ ಮೇಲಿನ ತೋಟದ ಮೇಲಿಂದ ಬಂದು ಒಡೆದೀರ್ ಮನೆಯ ಹಿಂದ್ಲೆ ಕಡೆ ಹೊಳ್ಳಿಯ ಮೇಲೆ ಕುಳಿತಳು.

ಹೆಗಡೇರ ಹೆಂಡತಿ ಒಂದು ಕೈಯಲ್ಲಿ ಬಾಳೆ, ನೀರ್ ಚೊಂಬು, ಇನ್ನೊಂದು ಕೈಲಿ ಉಪ್ಪು ಉಪ್ಪಿನಕಾಯಿಯ ಭರಣಿ ತೆಗೆದುಕೊಂಡು ಬಂದು ನಾಗಿಗೆ ಎಲೆ ನೀಡಿ, ನೀರು ಹನಿಸಿ ಒರಸಿಕೊಳ್ಳುವ ತನಕ ಅಲ್ಲೇ ಕೂತರು. ಹೊಳ್ಳಿ ಹತ್ತುವಾಗ ಕಾಲ ಮಂಡಿಗೆ ಕೈಕೊಟ್ಟಿದ್ದು, ಈಗ ಒಂಥರಾ ಹೆರ್ಕಾಲು ಹಾಕಿ ಕೂತಿದ್ದು ಎಲ್ಲ ನೋಡಿ ತನ್ನ ಅನುಮಾನ ದೃಢಪಡಿಸಿಕೊಂಡರು. ಎಂದಿನಂತೆ ಮೊದಲು ಅನ್ನಕ್ಕೆ ಹುಳಿ ಬಡಿಸದೆ ಬಸುರಿಯ ಮೊದಲನೇ ತುತ್ತೇ ಕೂಸಿಗೆ ಆಹಾರ ಅಂದುಕೊಳ್ಳುತ್ತ ಕಾದ ಹೊಟ್ಟೆಗೆ ತಂಪಾಗಲಿ ಎಂದು ತಂಬುಳಿಯನ್ನೇ ನೀಡಿದರು.

ಬಾಳೆ ಎತ್ತಿ ಪಾಗಾರದಾಚೆಯ ಅಗಳದಲ್ಲಿ ಎಸೆದು ಬಂದು ಉಂಡ ಜಾಗಕ್ಕೆ ಗೋಮಯ ಹಾಕಿ ಅಲ್ಲೇ ಕೂತ ನಾಗಿ ಕೂರ್‌ಕೂರ್ ಬೀಳುವುದಕ್ಕೆ ಶುರುಮಾಡಿದಳು. ಗಂಗೊಡ್ತಿಯ ಕರುಳು ಚುರ್ ಎಂದಿತು. 'ನಾಗಿ ಅಲ್ಲೆ ಬಗೀಲ್ ಅಡ್ದಾಗೆ; ತೋಟಕ್ಕೆ ಹೋಗಿ ಮತ್ತೆ ಬರೂದೆಂತದು. ಚಾ ಕುಡ್ಕಂಡೇ ಹೋಗ್ಲಾಗೂದು' ಎಂದು ಹೇಳಿದಾಗ ಆ ಮಾತಿಗೆ ಎಚ್ಚೆತ್ತ ನಾಗಿ ಸಂಜೆ ಒಳಗೆ ಮುಗಿಸಬೇಕಾಗಿದ್ದ ನೀರ್ಬಾರಿಯ ನೆನಪಾಗಿ ಹಿತ್ತಲು ಇಳಿಯತೊಡಗಿದಳು.

ಗಂಗೊಡ್ತಿ ಅವಳು ಹಳ್ಳದ ದಾರಿ ಹಿಡಿದು ಸಂಕ ದಾಟಿ ತೋಟಕ್ಕೆ ಇಳಿಯುವವರೆಗೂ ನೋಡುತ್ತಲೇ ನಿಂತರು. ತನ್ನ ಮಗಳು ಬಸುರಿ ಬಾಣಂತಿಯಾದಾಗ ನಡೆಸಿದ ಊಟೋಪಚಾರ ಕಾಳಜಿ ಎಲ್ಲ ನೆನಪಾಯಿತು. ಹೊತ್ತು ಹೊತ್ತಿಗೆ ಕೈಕಾಲ್ಗೆ ಬಿಸಿನೀರು, ಬಿಸಿ ಬಿಸಿ ಅನ್ನ, ಸೇರು ತುಪ್ಪ, ಗಡಿಗೆ ಮೊಸರು, ಕಷಾಯ, ಚೂರ್ಣ, ಹೊತ್ತು ಕಂತುವ ಮುನ್ನ ಹಾನ ಎಲ್ಲವೂ ನೆನಪಾಗಿ ಈ ಮಗೂನ ಪಾಡೇನು ಅಂತ ತಾಯ್ ಕರುಳಲ್ಲಿ ಮರುಕ ಹುಟ್ಟಿತು. ಈ ಅನುಕಂಪ ಜೊತೆ ಜೊತೆಗೆ ಹೊಟ್ಟೆಯಲ್ಲಿರುವ ಕೂಸಿನ ಅಪ್ಪ ಯಾರು ಅನ್ನುವ

